Reg. No.

# BCAKALS 101

## I Semester B.C.A. Examination, December 2024/January 2025
## (SEP) (2024 – 25 Batch Onwards)
## KANNADA

Time : 3 Hours Max. Marks : 80

I. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×8=24)**

1) ಭೀಷ್ಮನ ಪಟ್ಟಾಭಿಷೇಕದ ಸಂದರ್ಭದಲ್ಲಿ ನಡೆದ ವಾಗ್ವಾದವನ್ನು ವಿವರಿಸಿ.

**ಅಥವಾ**

ಹಲಗಲಿಯ ಬೇಡರ ಹೋರಾಟದ ಗಾಥೆಯನ್ನು ಲಾವಣಿ ಹೇಗೆ ಸಾದರ ಪಡಿಸುತ್ತದೆ ? ವಿವರಿಸಿ.

2) ಧನವಿಲ್ಲದ ಭೀಮಪ್ಪನ ಬದುಕು ದುರಂತ ಅಂತ್ಯವನ್ನು ಕಾಣುವ ಬಗೆಯನ್ನು ವಿವರಿಸಿ.

**ಅಥವಾ**

'ಅಕ್ಷರ ಕಲಿಕೆಗಾಗಿ ಹೋರಾಟ' ಲೇಖನದಲ್ಲಿ ಅಭಿವ್ಯಕ್ತಗೊಂಡ ದೇಜಗೌ ಅವರ ಹೋರಾಟದ ಬದುಕನ್ನು ವಿವರಿಸಿ.

3) ಕುರುಕ್ಷೇತ್ರದ ಯುದ್ಧದ ಸೂತ್ರಧಾರಿ ಕೃಷ್ಣನೇ ಎಂಬುದನ್ನು ನಾಟಕದ ಹಿನ್ನಲೆಯಲ್ಲಿ ವಿವರಿಸಿ.

**ಅಥವಾ**

ದುರ್ಯೋಧನ ಮತ್ತು ಸಂಜಯರ ನಡುವೆ ನಡೆದ ಸಂಭಾಷಣೆಯ ಸ್ವಾರಸ್ಯವೇನು ? ವಿವರಿಸಿ.

II. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿರಿ. **(3×5=15)**

1) 'ಅ ಆ ಮತ್ತು' ಕವಿತೆಯಲ್ಲಿ ಚಿತ್ರಣಗೊಂಡ ಬಡತನದ ದಾರುಣತೆಯನ್ನು ವಿವರಿಸಿ.

**ಅಥವಾ**

'ಕಣಿವೆಯ ಮುದುಕ' ಕಥನಕವನದ ಆಶಯವೇನು ? ವಿವರಿಸಿ.

2) ಭೂಮಿಯ ರಕ್ಷಣೆಯ ಬಗ್ಗೆ ನಾಗೇಶ ಹೆಗಡೆಯವರ ಅಭಿಪ್ರಾಯವೇನು ?

**ಅಥವಾ**

'ಮಾತಿನ ಮಲ್ಲಿ' ಪ್ರಬಂಧದ ಆಶಯವೇನು ? ವಿವರಿಸಿ.

S.D.M.C. OF BUSINESS MANAGEMENT LIBRARY

3) ಯುದ್ಧದ ಸಿದ್ಧತೆಯ ಬಗ್ಗೆ ಸೈನಿಕರ ನಿಲುವೇನು ?

**ಅಥವಾ**

ಗಾಂಧಾರಿ – ಧೃತರಾಷ್ಟ್ರರ ಸಂಭಾಷಣೆಯನ್ನು ವಿಶ್ಲೇಷಿಸಿ.

III. ಒಂದು ಪದ್ಯ ಭಾಗದ ಸಂದರ್ಭ ಸೂಚಿಸಿ, ಭಾವ ಸ್ವಾರಸ್ಯವನ್ನು ಬರೆಯಿರಿ. **(1×5=5)**

1) ನನ್ನವ್ವ ಫಲವತ್ತಾದ ಕಪ್ಪುನೆಲ
ಅಲ್ಲಿ ಹಸಿರು ಪತ್ರದ ಹರವು, ಬಿಳಿಯ ಹೂ ಹಬ್ಬ;
ಸುಟ್ಟಷ್ಟು ಕಸುವು, ನೊಂದಷ್ಟು ಹೂ ಹಣ್ಣು
ಮಕ್ಕಳೊದ್ದರೆ ಅವಳ ಅಂಗಾಂಗ ಪುಲಕ;
ಹೊತ್ತ ಬುಟ್ಟಿಯ ಇಟ್ಟು ನರಳಿ ಎವೆ ಮುಚ್ಚಿದಳು ತೆರೆಯದಂತೆ

2) ಕುಲಮನೆ ಮುನ್ನಮುಗ್ಗಡಿಪಿರೇಂಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವನನಟ್ಟಿ ತಿಂಬುವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ ।
ಕುಲಮಭಿಮಾನಮೊಂದು ಕುಲಮಣ್ಮು ಕುಲಂ ಬಗೆವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಾಡುಗುಂ ॥

IV. ಪದ್ಯದ ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ವಿವರಿಸಿ. **(2×4=8)**

1) ನಿನ್ನಾಸೆಯ ವೇಷದ ಪಾಶಕ್ಕೆ ನೀನೆ ಹೋಗು
2) ಮದ್ದುಂಟೆ ಎದೆನೋವಿಗೆ ಕೇಳುವಳು
3) ತನ್ನಿಕ್ಕಿದ ತತ್ತಿಯನೆ ಪಾವು ನೊಣೆವಂತಕ್ಕುಂ
4) ನಿನ್ನ ಈ ಬಗೆ ಮರುಕು ತಂದಿತು ಮರೆತ ಕಂದನ ನೆನಪನು.

S.D.M.C. OF BUSINESS MANAGEMENT LIBRARY

V. ಅ) ಎರಡನ್ನು ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಬರಗೂರು ರಾಮಚಂದ್ರಪ್ಪ
2) ನಾಗೇಶ್ ಹೆಗಡೆ
3) 'ರಮಾ'ಳ ಪಾತ್ರ ಪರಿಚಯ
4) ದೇ. ಜವರೇಗೌಡ.

ಆ) **ಎರಡನ್ನು** ಕುರಿತು ಟಿಪ್ಪಣಿ ಬರೆಯಿರಿ. **(2×4=8)**

1) ಕೃಷ್ಣ

2) ಗಾಂಧಾರಿ

3) ಕರ್ಣ

4) ಸಂಜಯ.

VI. ಕೆಳಗಿನ **ಎಲ್ಲಾ** ಪ್ರಶ್ನೆಗಳಿಗೆ **ಒಂದು** ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ. **(12×1=12)**

1) ನುಲಿಯ ಚೆಂದಯ್ಯನ ಕಾಯಕ ಯಾವುದು ?

2) 'ಶ್ರೀ ಹರಿಚರಿತೆ' ಈ ಮಹಾಕಾವ್ಯದ ಕರ್ತೃ ಯಾರು ?

3) ವೈದೇಹಿಯವರ ಮೂಲ ಹೆಸರೇನು ?

4) ಎಚ್. ಗೋವಿಂದಯ್ಯನವರ ಜನ್ಮಸ್ಥಳ ಯಾವುದು ?

5) 'ಬಾಳ್ನೋಟಗಳು' ಪ್ರಬಂಧ ಸಂಕಲನದ ಕರ್ತೃ ಯಾರು ?

6) 'ನೆತ್ತರಲ್ಲಿ ನೆಂದ ಹೂವು' ಇದು ಯಾರ ಕೃತಿ ?

7) ದೇ. ಜವರೇಗೌಡ ಅವರಿಗೆ ಮುಖ್ಯೋಪಾಧ್ಯಾಯರಾಗಿದ್ದವರು ಯಾರು ?

8) 'ನಮ್ಮೊಳಗಿನ ಬ್ರಹ್ಮಾಂಡ' ಇದು ಯಾರ ಕೃತಿ ?

9) ಕೃಷ್ಣನು ಪಾಂಡವರನ್ನು ಕಾಯಬೇಕೆಂದು ಯಾರಲ್ಲಿ ಭಿನ್ನವಿಸಿಕೊಳ್ಳುತ್ತಾನೆ ?

10) ಅಂಗೈಯಲ್ಲಿ ಕುರುಕ್ಷೇತ್ರವನ್ನು ಕಂಡು ವೀಕ್ಷಕ ವಿವರಣೆ ಮಾಡಿದವ ಯಾರು ?

11) 'ಶ್ರೀಗಂಧದ ಸಂಸಾರ' ಇದು ಯಾರ ಕೃತಿ ?

12) ಕೃಷ್ಣನ ಸಾರಥಿ ಯಾರು ?

S.D.M.C. OF ... LIBRARY ... EMENT